# APPLICATION UNDER RIGHT TO INFORMATION ACT, 2005

Date: 24/08/2020
Place: Chitradurga

To,

Mr. V. Rajesh,
General Manager, CPIO & the Public Information Officer,
The Power Grid Corporation of India Ltd.,
Southern Region Transmission System – II RHQ,
Near RTO Driving Test Track, Singanayakanahalli,
Yalahanka Hobali, Bangalore – 560 064.

Dear Sir/Madam,

**Subject: Application for seeking information under Right to Information Act, 2005**

*************

I Mr. Madhu N R, Advocate wish to seek below stated information:

That Your Organization has drawn/is drawing 400 KV high tension line in the district of Chitradurga. In respect of the same the Deputy Commissioner, Chitradurga has passed an order bearing No. MAG: CR: 505/16-17 dated 20.12.2016 whereby they have determined the compensation payable to the farmers upon whose lands you have drawn/drawing the said high tension line.

In respect of the same kindly **confirm whether your Company/Organisation is paying the compensation to the aggrieved farmers as determined by the Deputy Commissioner, Chitradurga vide their order dated 20.12.2016.**

**Note:** A copy of the Order dated 20.12.2016 passed by the Deputy Commissioner, Chitradurga is attached for your kind reference.

I hereby inform you that the following formalities have been completed by me:

A. That I have annexed the Postal Order bearing No. 48F 655975 for an amount of Rs.10/- in your favour dated 02.05.2019.
B. That I am the Citizen of India seeking information in the said capacity.

Request you to send all the information sought by me at the earliest.

1129

Yours faithfully,

Madhu N.R.

(Mr. Madhu. N. R)
Advocate
Address: Srigandha Nilaya, 1st Floor,
1st Cross, Sangameshwara Layout,
Behind Akashavani,
Kelagote, Chitradurga – 577 501
Mobile: 9513317555

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ

# ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಚಿತ್ರದುರ್ಗ ಜಿಲ್ಲೆ,
# ಚಿತ್ರದುರ್ಗ ಕಛೇರಿ ನಡವಳಿಗಳು

ನಂ:ಎಂಇಜೆ:ಸಿಆರ್:505/16-17, ದಿನಾಂಕ:20-12-2016

ವಿಷಯ: ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್, ವತಿಯಿಂದ 400 ಕೆ.ವಿ. ಡಿ/ಸಿ ಮತ್ತು ಎಂ/ಸಿ ವಿದ್ಯುತ್ ಲೈನ್ ಅಳವಡಿಸುವಲ್ಲಿ ನಷ್ಟವಾಗುವ ಖಾಸಗಿ ಜಮೀನು ಮಾಲೀಕರಿಗೆ ಸರ್ಕಾರದ ಮಾರ್ಗಸೂಚಿಗಳನ್ವಯ ಪರಿಹಾರ ನೀಡುವ ಕುರಿತು ಆದೇಶ.

ಉಲ್ಲೇಖ: ಡೆಪ್ಯುಟಿ ಜನರಲ್ ಮ್ಯಾನೇಜರ್, ಪವರ್‌ಗ್ರಿಡ್ ಕಾರ್ಪೋರೇಷನ ಆಫ್ ಇಂಡಿಯಾ ಲಿಮಿಟೆಡ್, ಪಾವಗಡ, ತುಮಕೂರು ಜಿಲ್ಲೆ ಇವರ ಪತ್ರ ಸಂಖ್ಯೆ:ಎಸ್‌ಆರ್‌ಟಿಎಸ್:2:ಪಾವಗಡ:ಟಿಎಲ್‌ಸಿ: 34/ಇ, ದಿನಾಂಕ:21-07-2016.

*****

## ಪ್ರಸ್ತಾವನೆ:

ಉಲ್ಲೇಖ ಪತ್ರದಲ್ಲಿ ಇವರಿಂದ ಭಾರತ ಸರ್ಕಾರದ ಇಂಧನ ಇಲಾಖೆ ವತಿಯಿಂದ ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಇವರಿಗೆ ಚಿತ್ರದುರ್ಗ ಜಿಲ್ಲೆಯ ಪರಶುರಾಂಪುರ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ 400/200 ಕೆ.ವಿ. ಪೂಲಿಂಗ್ ಸ್ಟೇಷನ್ ನಿರ್ಮಿಸಿ, ವಿದ್ಯುತ್ ಲೈನ್ ಅಳವಡಿಸಿ, ವಿದ್ಯುತ್ ಸಾಗಾಣೆ ಮಾಡಲು ಸೂಚಿಸಿರುವ ಮೇರೆಗೆ, ಭಾರತೀಯ ಟೆಲಿಗ್ರಾಫಿಕ್ ಆಕ್ಟ್ 1885 ರ ಕಲಂ 10 ರಿಂದ 19 ರವರೆಗಿನ ನಿಯಮಗಳನ್ವಯ ಹಾಗೂ ಎಲೆಕ್ಟ್ರಿಸಿಟಿ ಆಕ್ಟ್-2003 ರ ಕಲಂ 164 ರಂತೆ ಗೋಪುರಗಳ ಅಳವಡಿಕೆಯ ಜಾಗಕ್ಕೆ ಹಾಗೂ ಹಾನಿಗೊಳಗಾದ ಬೆಳೆಗಳಿಗೆ ಪರಿಹಾರಧನ ನೀಡುವುದರೊಂದಿಗೆ ಕಾಮಗಾರಿಯ ಕಾರ್ಯನಿರ್ವಹಿಸಲು ಅಗತ್ಯ ಸಹಕಾರ ನೀಡಿ ಕಾಮಗಾರಿ ಪೂರ್ಣಗೊಳಿಸಲು ಅನುವು ಮಾಡಿಕೊಡಲು ಉಲ್ಲೇಖ(1) ರ ಪತ್ರದಲ್ಲಿ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ವತಿಯಿಂದ ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಮದ್ದಿಹಳ್ಳಿ, ಖಂಡೇನಹಳ್ಳಿ, ಒಟ್ಟಾಯಹಟ್ಟಿ, ಕೃಷ್ಣಪುರ, ಶ್ರವಣಗೆರೆ, ಗೊಲ್ಲರಹಳ್ಳಿ, ಎಲಗೊಂಡನಹಳ್ಳಿ, ಅಬ್ಬಿನಕೋಟೆ, ದೇವರಕಟ್ಟೆ, ಉಪ್ಪಾರಹಳ್ಳಿ, ಜಡೇಗೊಂಡನಹಳ್ಳಿ, ಹೇಮದಳ, ಗನ್ನಾಯಕನಹಳ್ಳಿ, ಮೇಟಿಕುರ್ಕೆ, ಕಪ್ಪೆಚಿಕ್ಕನಹಳ್ಳಿ, ಕರೇನಹಟ್ಟಿ ಗ್ರಾಮಗಳಲ್ಲಿ ಈ ಕಾಮಗಾರಿಗಳನ್ನು ನಿರ್ವಹಿಸುವುದಾಗಿ ತಿಳಿದುಬಂದಿದೆ.

ಭಾರತೀಯ ಟೆಲಿಗ್ರಾಫಿಕ್ ಕಾಯ್ದೆ 1885 ರ ಕಲಂ 10 ರ ಅಡಿ ಮತ್ತು ವಿದ್ಯುತ್ ಕಾಯ್ದೆ 2003 ರ ರ ಪರಿಚ್ಛೇದ 164 ಅಡಿ ನೀಡಲ್ಪಟ್ಟ ಅಧಿಕಾರದ ಮೇಲೆ, ಈ ಮೂಲಕ ಆದೇಶ ನೀಡುವುದೇನೆಂದರೆ, ಈ ಆದೇಶದ ಪ್ಯಾರ 10 ರ ಪ್ರಕಾರ ಪರಿಹಾರ ನೀಡಿದ ನಂತರ, ಟೆಲಿಗ್ರಾಫಿಕ್/ವಿದ್ಯುತ್ ಪ್ರಾಧಿಕಾರದವರು ಈ ಪ್ರಕರಣದಲ್ಲಿ ಭಾರತೀಯ ಟೆಲಿಗ್ರಾಫಿಕ್ ಕಾಯ್ದೆಯ ಕಲಂ 10 ರ ಅಡಿ ಖಾಸಗಿ ಆಸ್ತಿಯ ಕುರಿತು ಟೆಲಿಗ್ರಾಫಿಕ್ ವಿದ್ಯುತ್ ಪ್ರಾಧಿಕಾರಕ್ಕೆ ಅನುಗುಣವಾಗಿ ತಮ್ಮ ಪ್ರಾಧಿಕಾರವನ್ನು ಉಪಯೋಗಿಸಬಹುದು. ಒಂದು ವೇಳೆ ಯಾವುದಾದರು ವ್ಯಕ್ತಿ ಸದರಿ ಅಧಿಕಾರವನ್ನು ಪ್ರತಿರೋಧಿಸಿದಲೆ ಅಥವಾ ಆಸ್ತಿಯ ಮೇಲೆ ನಿಯಂತ್ರಣ

ಹೊಂದಿದ ವ್ಯಕ್ತಿ ಇದನ್ನು ಪ್ರಯೋಗಸುವಲ್ಲಿ ಸಂಪೂರ್ಣ ಅನುಕೂಲಗಳನ್ನು ಒದಗಿಸದಿದ್ದಲ್ಲಿ ಅದನ್ನು ಭಾರತೀಯ ದಂಡ ಸಂಹಿತ ಕಾಯ್ದೆ (45 ರ 186) ಕಲಂ 188 ರ ಅಡಿ ಅಪರಾಧ ಎಸಗಿದ್ದಾರೆಂದು ಪರಿಗಣಿಸಲಾಗುವುದು ಎಂದು ತಿಳಿಸಲಾಗಿದೆ. ಅದರಂತೆ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

## ಆದೇಶ

ಪರಿಹಾರದ ಮೊತ್ತವನ್ನು ಇಂಡಿಯನ್ ಟೆಲಿಗ್ರಾಫಿಕ್ ಆಕ್ಟ್ 1885 ರ ಕಲಂ 10(ಡಿ) ಯ ಪ್ರಕಾರ ನಿಗದಿಪಡಿಸಿ, ಹಿರಿಯೂರು ತಾಲ್ಲೂಕಿನಲ್ಲಿ ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ವತಿಯಿಂದ ಅಳವಡಿಸುತ್ತಿರುವ 400/200 ಕೆ.ವಿ. ವಿದ್ಯುತ್ ಲೈನ್‌ಗಳ ಅಳವಡಿಕೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪರಿಹಾರದ ಮೊತ್ತವನ್ನು ನೀಡಲು ಆದೇಶಿಸಿದೆ.

1. 400 ಕೆ.ವಿ. ಡಿ/ಸಿ ಪಾವಗಡ ಪೂಲಿಂಗ್ ಸ್ಟೇಷನ್ – ಹಿರಿಯೂರು ವಿದ್ಯುತ್ ಮಾರ್ಗ

| Sl.No. | Type of Towers | fixed Compensation in lakhs |
|---|---|---|
| 1. | "DA" Type | 2.25 Lakhs |
| 2. | "DB" Type | 2.50 Lakhs |
| 3. | "DC" Type | 3.00 Lakhs |
| 4. | "DD" Type | 4.0 Lakhs |

2. ಬಳ್ಳಾರಿ–ತುಮಕೂರು 400 ಕೆ.ವಿ. ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪಾವಗಡದಿಂದ ಸಂಪರ್ಕ ಕಲ್ಪಿಸುವ ಲೈನ್ ಇನ್ ಲೈನ್ ಔಟ್ ಮಲ್ಟಿ ಸರ್ಕಿಟ್ ಮಾರ್ಗ (ಪರಶುರಾಂಪುರ ಮತ್ತು ಗೊಲ್ಲರಹಟ್ಟಿ)

| Sl.No. | Type of Towers | fixed Compensation in lakhs |
|---|---|---|
| 1. | "DA" Type | 2.25 Lakhs |
| 2. | "DB" Type | 2.50 Lakhs |
| 3. | "DC" Type | 3.00 Lakhs |
| 4. | "DD" Type | 4.00 Lakhs |

ಹಾಗೂ ವಿದ್ಯುತ್ ಲೈನ್ ಎಳೆಯುವ ಹಾದಿಯಲ್ಲಿ ಬರುವ ಎಲ್ಲಾ ತರಹದ ಮರಗಳನ್ನು ಕ್ಲಾಸ್ 'ಎ' ಮಂಗಳೆಂದು ಪರಿಗಣಿಸಿ, ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳನ್ನು ಆಧರಿಸಿ ಈ ಕೆಳಕಂಡಂತೆ ಪರಿಹಾರ ನೀಡಲು ಆದೇಶಿಸಿದೆ.

1. ತೆಂಗಿನ ಮರ ಒಂದಕ್ಕೆ ರೂ. 16,314–00
2. ಅಡಿಕೆ ಮರ ಒಂದಕ್ಕೆ ರೂ. 3,728–00
3. ಮಾವಿನ ಮರ ಒಂದಕ್ಕೆ ರೂ. 27,862–00
4. ಹಲಸಿನ ಮರ ಒಂದಕ್ಕೆ ರೂ. 14,800–00

[illegible signature and stamp]

ಮತ್ತು ಇತರ ಮರಗಳಿಗೆ ಸರ್ಕಾರ ನಿಗಧಿಪಡಿಸಿರುವ ದರದಂತೆ ಪರಿಹಾರ ನೀಡುವುದರ ಶೇಕಡ 10 ರಷ್ಟು ಎಕ್ಸ್‌ಗ್ರೇಷಿಯಾ ಪರಿಹಾರವನ್ನು ತೋಟಗಾರಿಕೆ ಹಾಗೂ ಅರಣ್ಯ ಇಲಾಖೆಯಿಂದ ಬೆಲೆ ನಿಗದಿಪಡಿಸಿಕೊಂಡು ಪರಿಹಾರದ ಮೊತ್ತವನ್ನು ಪಾವತಿಸುವುದು. ಮತ್ತು ಇತರೆ ಮರಗಳಿಗೆ ಸರ್ಕಾರ ನಿಗದಿಪಡಿಸಿರುವ ದರದಂತೆ ಪರಿಹಾರ ನೀಡುವುದರ ಶೇಕಡ 10 ರಷ್ಟು ಎಕ್ಸ್‌ಗ್ರೇಷಿಯಾ ಪರಿಹಾರವನ್ನು ಸಹ ನೀಡಲು ಹಾಗೂ ಸದರಿ ಕಾಮಗಾರಿಯನ್ನು ನಿರ್ಮಿಸುವ ಸಂದರ್ಭದಲ್ಲಿ ತಾತ್ಕಾಲಿಕ ರಸ್ತೆಯನ್ನು ಹಾಗೂ ಸಾಮಾಗ್ರಿಗಳನ್ನು ಸಾಗಿಸಲು, ಶೇಖರಿಸಲು ಉಪಯೋಗಿಸಿದ ಜಮೀನಿನಲ್ಲಿ, ನಷ್ಟವಾದ ಬೆಳೆಗಳನ್ನು ಪರಿಗಣಿಸಿ (ಗೋಪುರದ ಕ್ಷೇತ್ರ ಹೊರತುಡಿಸಿ) ಪರಿಹಾರವನ್ನು ಒಂದೇ ಕಂತಿನಲ್ಲಿ ನೀಡುವುದು, ಭೂ ಮಾಲೀಕರುಗಳಿಗೆ ಹಾನಿಗೊಳಗಾಗುವ ಮರಗಳು ಮತ್ತು ಬೆಳೆಗಳಿಗೆ ನೀಡುವ ಪರಿಹಾರದ ಜೊತೆಗೆ, ಪವರ್ ಲೈನ್ ಎಳೆಯುವ ಸಮಯದಲ್ಲಿ ಜಮೀನಿಗೆ ಆಗುವ ಹಾನಿ ಬಗ್ಗೆ ಪ್ರತಿ ಎಕರೆಗೆ (46 ಮೀಟರ್ ಕಾರಿಡಾರಿಗೆ ಮಾತ್ರ) ಅಧಿಕ ಪರಿಹಾರವಾಗಿ ರೂ.2.00 ಲಕ್ಷಗಳನ್ನು (ಎರಡು ಲಕ್ಷಗಳು ಮಾತ್ರ) ಪಾವತಿಸಲು ಆದೇಶಿಸಿದೆ.

ಭೂ ಮಾಲೀಕರುಗಳಿಗೆ ಈ ಕೆಳಕಂಡ ಎರಡು ಹಂತಗಳಲ್ಲಿ ಪರಿಹಾರಧನವನ್ನು ವಿತರಿಸುವುದು.

ಹಂತ 1: ಪ್ರಥಮ ಹಂತದಲ್ಲಿ ಪವರ್ ಲೈನ್ ಟವರ್ ನಿರ್ಮಾಣ ಮಾಡುವ ಸ್ಥಳಕ್ಕೆ ಸಂಬಂಧಿಸಿದ ಜಮೀನಿಗೆ ಟವರ್ ಅಡಿಪಾಯದ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡ ನಂತರ ಶೇಕಡ 50% ರಷ್ಟು ಹಾಗೂ ಟವರ್ ನಿರ್ಮಾಣ ಪೂರ್ಣಗೊಂಡ ನಂತರ ಶೇಕಡ 50% ರಷ್ಟು ಪರಿಹಾರ ನೀಡತಕ್ಕದ್ದು.

ಹಂತ 2: ಪವರ್ ಲೈನ್ ಎಳೆದ ನಂತರ ಪವರ್ ಲೈನ್ ಹಾದು ಹೋಗುವ ಜಮೀನಿನಲ್ಲಿನ ಬೆಳೆಗಳಿಗೆ, ಬೆಳೆ ನಷ್ಟ ಪರಿಹಾರ, ಮರ ನಷ್ಟ ಪರಿಹಾರ ಮತ್ತು ಕಾರಿಡಾರ್‌ಗೆ ಶೇಕಡ 100% ರಷ್ಟು ಪರಿಹಾರವನ್ನು ಪಾವತಿಸತಕ್ಕದ್ದು.

ಪರಿಹಾರದ ಮೊತ್ತದ ಬಗ್ಗೆ ಮತ್ತು ಪರಿಹಾರ ಹಂಚಿಕೊಳ್ಳುವ ಬಗ್ಗೆ ಯಾವುದೇ ವ್ಯಾಜ್ಯಗಳಿದ್ದಲ್ಲಿ ಸದರಿ ವ್ಯಾಜ್ಯಗಳನ್ನು ಭಾರತೀಯ ಟೆಲಿಗ್ರಾಫ್ ಕಾಯ್ದೆ 1885 ರ ಸೆಕ್ಷನ್ 16(3) ಮತ್ತು 16(4) ರ ಅಡಿಯಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಬಹುದಾಗಿದೆ.

(ಎಂ.ಕೆ.ಶ್ರೀರಂಗಯ್ಯ)
ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ದಂಡಾಧಿಕಾರಿಗಳು,
ಚಿತ್ರದುರ್ಗ ಜಿಲ್ಲೆ.

ಪ್ರತಿಯನ್ನು:

1. ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಇವರಿಗೆ ಮಾಹಿತಿಗಾಗಿ.
2. ಪೊಲೀಸ್ ಉಪಾಧೀಕ್ಷಕರು, ಚಳ್ಳಕೆರೆ ಉಪವಿಭಾಗ, ಹಿರಿಯೂರು ಇವರಿಗೆ ಸೂಕ್ತ ಕ್ರಮಕ್ಕಾಗಿ.
3. ಡೆಪ್ಯೂಟಿ ಜನರಲ್ ಮ್ಯಾನೇಜರ್, ಪವರ್‌ಗ್ರಿಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಪಾವಗಡ, ತುಮಕೂರು ಜಿಲ್ಲೆ
4. ತಹಶೀಲ್ದಾರ್, ಚಳ್ಳಕೆರೆ ಇವರಿಗೆ ಸ್ಥಳೀಯ ಸಮಸ್ಯೆಗಳಿದ್ದಲ್ಲಿ ಪರಿಹರಿಸುವಂತೆ ಸೂಚಿಸಿ ಕಳುಹಿಸಿದೆ
5. ಕಛೇರಿ ಪ್ರತಿ.

ಸ್ವಯಂ ದೃಢೀಕರಿಸಿದೆ
18